ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಗುರುವಾರ, ದಿನಾಂಕ : 12 ನೇ ಮಾರ್ಚ್, 2020

ಎತ್ತಿನ ಹೊಳೆ ಯೋಜನೆಯ ಕುರಿತು

ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

781 (875) ಮಾನ್ಯ ಜಲಸಂಪನ್ಮೂಲ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಎತ್ತಿನ ಹೊಳೆ ಯೋಜನೆಗಾಗಿ ಮಂಜೂರಾದ ಹಣವೆಷ್ಟು ; ಖರ್ಚಾಗಿರುವ ಹಣವೆಷ್ಟು ; ಸದರಿ ಯೋಜನೆ ಯಾವ ಹಂತದಲ್ಲಿದೆ; ಈವರೆವಿಗೂ ಮುಗಿದಿರುವ ಕಾಮಗಾರಿ ಎಷ್ಟು ; ಯಾವ ಕಾಮಗಾರಿಗಳನ್ನು ನಿರ್ವಹಿಸಲಾಗಿದೆ ; ಇದಕ್ಕೆ ಪಾವತಿಸಿರುವ ಮೊತ್ತ ಎಷ್ಟು ;

(ಆ) ಈ ಯೋಜನೆಯನ್ನು ಮುಕ್ತಾಯಗೊಳಿಸಲು ನೀಡಿರುವ ಸಮಯಾವಕಾಶ ಎಷ್ಟು ;

(ಇ) ಈ ಯೋಜನೆ ನಿರ್ವಹಣೆಗೆ ಇರುವ ಅಡ್ಡಿ ಆತಂಕಗಳೇನು ; ನಿವಾರಣೆಗೆ ಕೈಗೊಂಡಿರುವ ಸೂಕ್ತ ಕ್ರಮಗಳೇನು ?